ಕನ್ನಡದ ಕಥಾಜಗತ್ತನ್ನು ವಿಸ್ತರಿಸಿದ ಕಥೆಗಾರರ ಕಥೆ ಬರೆಯುವ ಕಸುಬಿನ ಕುರಿತಾದ ಮಾಲಿಕೆ – 'ನನ್ನ ಕಥಾಪ್ರಸಂಗ'. ಕಥಾಯಾನದ ಖುಷಿ, ಸಂಕಟ, ಆ ಪ್ರಕಾರದ ಕುರಿತಾದ ವ್ಯಾಮೋಹ, ಸವಾಲು, ಮಾಂತ್ರಿಕತೆ, ಅದರಿಂದ ಆಗುವ ಬಿಡುಗಡೆ – ಇವೆಲ್ಲ ಅನುಭವಗಳನ್ನು ಒಳಗೊಳ್ಳಲಿರುವ ಈ ಮಾಲಿಕೆಗೆ ಬಹುಕಾಲದಿಂದ ಕಥೆಗಳನ್ನು ಬರೆದುಕೊಂಡು ಬಂದ ಕಥೆಗಾರರು ಬರೆಯಲಿದ್ದಾರೆ. ಕಥೆಯ ತಂತ್ರ ಮತ್ತು ನಿರೂಪಣಾ ವಿಧಾನದ ಕುರಿತ ಕಥೆಗಾರರ ಸ್ವಅನುಭವ 'ಮಯೂರ'ದ ಪುಟಗಳಲ್ಲಿ ದಾಖಲಾಗಲಿದೆ



ಮೊಗಳ್ಳಿ ಗಣೇಶ್ ಹುಟ್ಟಿದ್ದು ಚನ್ನಪಟ್ಟಣ ತಾಲ್ಲೂಕಿನ ಸಂತೆಮೊಗೇನಹಳ್ಳಿಯಲ್ಲಿ. ಹಳ್ಳಿಯಲ್ಲಿ ಕಳೆದ ಬಾಲ್ಯದ ಅನುಭವ, ಮುಂದೆ ಪ್ರಜ್ಞೆಗೆ ದಕ್ಕಿದ ಲೋಕದ ರೀತಿನೀತಿ, ಆಮೇಲೆ ವ್ಯವಹಾರ ಲೋಕ ನೀಡಿದ ಸಿಹಿಕಹಿ ಎಲ್ಲವನ್ನೂ ಅದ್ಭುತವಾಗಿ ನಿರೂಪಿಸುವ ಗಣೇಶ್, ಕನ್ನಡ ಕಥನ ಪರಂಪರೆಗೆ ಹೊಸತನ ನೀಡಲು ಪ್ರಯತ್ನಿಸಿ ಯಶಸ್ವಿಯಾದ ಕಥೆಗಾರ. ಕಾವ್ಯ, ವಿಮರ್ಶೆ, ಜಾನಪದ ಕ್ಷೇತ್ರಗಳಲ್ಲೂ ಅವರು ಕೆಲಸ ಮಾಡಿದ್ದಾರೆ. ಪ್ರಸ್ತುತ ಹಂಪಿಯ ಕನ್ನಡ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರು.

ಪ್ರಕಟಿತ ಕಥಾಸಂಗ್ರಹಗಳು: 'ಬುಗುರಿ', 'ಮಣ್ಣು', 'ಅತ್ತೆ', 'ಭೂಮಿ', 'ಕನ್ನೆಮಳೆ', 'ಮೊಗಳ್ಳಿ ಕಥೆಗಳು' (ಆವರೆಗಿನ ಬಹುಪಾಲು ಕಥೆಗಳ ಸಂಕಲನ), 'ದೇವರ ದಾರಿ'. 'ಪ್ರಜಾವಾಣಿ' ದೀಪಾವಳಿ ಕಥಾಸ್ಪರ್ಧೆಯಲ್ಲಿ ಅವರ ಕತೆಗಳು ನಾಲ್ಕು ಬಾರಿ ಬಹುಮಾನ ಪಡೆದಿವೆ. 'ಒಂದು ಹಳೆಯ ಚಡ್ಡಿ' (1989), 'ಬುಗುರಿ' (1990), 'ಬತ್ತ' (1991), 'ತೋಪು' (1998).